

ಡಾ.ವಿನೋದ ಛೆಬ್ಬಿ

ಪರಸಂಬಂಧದ ಮೂಲವು ಆದಕ್ಕೆ ಕೈಹಾಕಿದ ಸಂಗಾತಿಯ ನಿರ್ಧಾರ ಮಾತ್ರವೆ, ಅಥವಾ ಬೇರೆ ಕಾರಣಗಳಿವೆಯೆ?

# 74: ವಿರಸವಿಲ್ಲದ ಪರಸಂಬಂಧ?

ಕೆಲವು ವಾರಗಳಿಂದ ವಿವಾಹಬಾಹಿರ ಸಂಬಂಧಗಳ (ಪರಸಂಬಂಧ) ಬಗೆಗೆ ಚರ್ಚಿಸುತ್ತಿದ್ದೇವೆ. ಮುಂಬರುವ ವರ್ಷಗಳಲ್ಲಿ ಸ್ತ್ರೀಯರು ಪರಸಂಬಂಧಗಳಲ್ಲಿ ತೊಡಗುವ ಸಾಧ್ಯತೆ ಹೆಚ್ಚಾಗಿದೆಯೆಂದೂ, ಇದನ್ನು ನಿಭಾಯಿಸಲು ಆಪ್ತಸಲಹೆಗಾರರಿಗೆ ಅಗತ್ಯವಾದ ಕೌಶಲ್ಯದ ಕೊರತೆ ಇದೆಯೆಂದೂ ಹೋದಸಲ ಮಾತಾಡಿಕೊಂಡೆವು. ಈಗ ಪರಸಂಬಂಧಗಳ ಹಿಂದಿನ ಪ್ರೇರಣೆಯನ್ನು ಕೆಲವು ದೃಷ್ಟಾಂತಗಳ ಮೂಲಕ ಕಂಡುಹಿಡಿಯೋಣ.

ದೃಷ್ಟಾಂತ ಒಂದು: ಇವರಿಬ್ಬರೂ ಸಂಪ್ರದಾಯದಂತೆ ಮದುವೆಯಾಗಿ ಮಕ್ಕಳಾಗಿವೆ. ಇದು ಸಂಪ್ರದಾಯಸ್ಥ ಕೂಡುಕುಟುಂಬ. ಹೆಂಡತಿಯ ಮನೆಗೆಲಸ, ಹಿರಿಯರಿಗೆ ವಿಧೇಯತೆ, ಮಕ್ಕಳ ಲಾಲನೆಪಾಲನೆ ಎಲ್ಲವೂ ಒಂದು ಸಂಪ್ರದಾಯದ ಚೌಕಟ್ಟಿನಲ್ಲಿ ನಡೆಯುತ್ತಿದೆ. ಗಂಡಹೆಂಡಿರ ಖಾಸಗಿ ಬದುಕೂ ಅಷ್ಟೇ. ಅದಕ್ಕೂ ಚೌಕಟ್ಟಿದೆ. ಮಲಗುವ ಕೋಣೆಯಲ್ಲೇ ಗಂಡಹೆಂಡಿರ ಭೇಟಿ. ಅರ್ಥವಿಲ್ಲದ ಸಂಭಾಷಣೆಯ ತುಣುಕಿನ ನಂತರ ಗಂಡ ಹೆಂಡತಿಯನ್ನು ತನ್ನೆಡೆಗೆ ಎಳೆದುಕೊಳ್ಳುತ್ತಾನೆ. ಆಸೆ ತೀರಿಸಿಕೊಂಡು ಆಚೆ ತಿರುಗಿಕೊಳ್ಳುತ್ತಾನೆ. ಹೆಂಡತಿ ಕಣ್ಣುಮುಚ್ಚುವ ತನಕ ಕಣ್ತೆರೆದು ಸೂರು ನೋಡುತ್ತಿರುತ್ತಾಳೆ. ಹೀಗೆ ಒಂದೆರಡಲ್ಲ, ಆರು ವರ್ಷ ಕಳೆದಿದ್ದಾಳೆ. ಒಂದು ದಿನ ಮಧ್ಯಾಹ್ನ ಬಟ್ಟೆ ಒಣಗಹಾಕಲು ಮಾಳಿಗೆಗೆ ಹೋದಾಗ ಪಕ್ಕದ ಮಹಡಿಗೆ ಹೊಸದಾಗಿ ಬಂದ ತರುಣ ಕಣ್ಣಿಗೆ ಬೀಳುತ್ತಾನೆ. ಅವನ ಕಣ್ಣನಗುವಿಗೆ ಇವಳು ಬಲೆಬೀಳುತ್ತಾಳೆ. ಇವಳ ಮೈಮಾಟದ ಬಗೆಗೆ ಅವನು ಮಾತಾಡುವಾಗ ಇವಳ ಮೈ ಮಿಂಚಾಗುತ್ತದೆ. ಆಗದೆನಿಸಿದರೂ ಅವನಿಗಾಗಿ ಕಾತರದಿಂದ ಕಾಯುತ್ತಾಳೆ. ತಪ್ಪೆಂದು ಅನ್ನಿಸುವಾಗಲೇ ತಪ್ಪದೆ ಅವನನ್ನು ಕೂಡುತ್ತಾಳೆ. ಅನನ್ಯತೆ ಅನುಭವಿಸುತ್ತಾಳೆ. ಈಗವಳು ರಾತ್ರಿ ಕಣ್ಣುಮುಚ್ಚುವಾಗ ನಾಳಿನ ಮಿಲನದ ಕನಸು ಕಾಣುತ್ತಾಳೆ. ಅವಳ ಲವಲವಿಕೆ ಮನೆಯವರಿಗೆಲ್ಲ ಕಾಣತೊಡಗುತ್ತದೆ. ವಿಷಯ ಬಯಲಿಗೆ ಬಂದರೂ ಮೌನದ ಹೊರತು ಮತ್ತೇನೂ ಹೊರಬರದಿರುವಾಗ ಗಂಡ ಅವಳನ್ನು ನನ್ನಲ್ಲಿ ಕರೆತರುತ್ತಾನೆ. ನನ್ನೆದುರು ಅವಳನ್ನು ತಿವಿಯುತ್ತಾನೆ: 'ಇದು ತಪ್ಪೂಂತ ನಿನಗೆ ಅನ್ನಿಸಲಿಲ್ಲವೆ? ಮನಸ್ಸಾಕ್ಷಿ ನಿನ್ನನ್ನು ತಡೆಯಲಿಲ್ಲವೆ?' ಹೆಂಡತಿ ಹೇಳುತ್ತಾಳೆ: 'ಹೌದು. ಇದು ತಪ್ಪು ಅಂತ ಅನ್ನಿಸಿತ್ತು. ಆದರೆ ಮನಸ್ಸಾಕ್ಷಿಯು ನನ್ನನ್ನು ತಡೆಯುವುದಕ್ಕಿಂತ ಮುಂಚೆ ನಾನೇ ಅದನ್ನು ತಡೆದು ಮುಂದೆ ಹೆಜ್ಜೆಯಿಟ್ಟೆ.' ಗಂಡ ಅವಾಕ್ಕಾಗಿ ಅವಳನ್ನು, ನನ್ನನ್ನು ಮಿಕಿಮಿಕಿ ನೋಡುತ್ತಾನೆ. ನಂತರ ಏಕಾಂತದಲ್ಲಿ ಆಕೆ ಹೇಳಿಕೊಳ್ಳುತ್ತಾಳೆ: 'ಇನ್ನೊಬ್ಬನ ಜೊತೆ ನಾನೇನು ಅನುಭವಿಸಿದೆ ಅಂತ ನೆನೆಸಿಕೊಂಡರೆ ಅದರಿಂದ ಉಂಟಾದ ತಪ್ಪಿತಸ್ಥ ಭಾವಕ್ಕಿಂತ, ಒಂದುವೇಳೆ ಅವಕಾಶ ಕಳೆದುಕೊಂಡಿದ್ದರೆ ಅದೇ ನನ್ನನ್ನು ಹೆಚ್ಚು ಸತಾಯಿಸುತ್ತಿತ್ತು.'

ಇವಳ ಪರಸಂಗ ಯಾಕಿರಬಹುದು? ಗಂಡಹೆಂಡಿರ ನಡುವೆ ಕಾಮಕ್ರಿಯೆ ನಡೆಯುತ್ತಿದ್ದರೂ ಅದರಲ್ಲಿ ಶೃಂಗಾರಭಾವ ಎಳ್ಳಷ್ಟೂ ಇಲ್ಲ. ಅದರ ಕೊರತೆ ಪ್ರಣಯಿಯ ಸಾನ್ನಿಧ್ಯದಲ್ಲಿ ಭರ್ತಿಯಾಗಿದೆ. ಪ್ರಶ್ನೆ ಏನೆಂದರೆ, ದಾಂಪತ್ಯದಲ್ಲಿ ಶೃಂಗಾರಭಾವ (**Erotic intelligence**) ಎಲ್ಲಿ ಹೋಗಿತ್ತು, ಹಾಗೂ ಅದು ಮೂರನೆಯವರ ಜೊತೆಗೆ ಅರಳಲು ಸಾಧ್ಯವಾದುದಾದರೂ ಹೇಗೆ? (ಇದರ ಮನೋವೈಜ್ಞಾನಿಕ ಹೊಳಹುಗಳನ್ನು ಇನ್ನೊಂದು ಸಲ ನೋಡೋಣ.)

ದೃಷ್ಟಾಂತ ಎರಡು: ಇವರ ಪ್ರೇಮವಿವಾಹವಾಗಿ ಹಲವು ವರ್ಷಗಳಾಗಿವೆ. ಆದರೆ ಮದುವೆಯ ಮುಂಚೆ ಇದ್ದ ಭಿನ್ನಾಭಿಪ್ರಾಯಗಳು ಇನ್ನೂ ಬಗೆಹರಿದಿಲ್ಲ. ಸಾಕಷ್ಟು ಸಲ ವಾಗ್ವಾದಗಳು ರಾತ್ರಿ ನಿದ್ರೆಗೆಡಿಸಿವೆ. ಬರಬರುತ್ತ ಜಗಳದ ನಂತರದ ಶೀತಲಯುದ್ಧದ ಅವಧಿ ಹೆಚ್ಚಾಗುತ್ತ ಮೌನವು ದಿನಗಟ್ಟಲೆ ಎಳೆಯುತ್ತಿದೆ. ಹೀಗಿರುವಾಗ ಗಂಡ ಆಫೀಸಿನಲ್ಲಿ ತನ್ನೆದುರು ದಿನಾಲೂ ಕುಳಿತುಕೊಳ್ಳುವ ಹೆಣ್ಣೊಬ್ಬಳನ್ನು ಒಂದುದಿನ ಗಮನಿಸುತ್ತಾನೆ. ಅರೆ, ಇವಳನ್ನು ತಾನು ಇಲ್ಲಿಯ ತನಕ ಸರಿಯಾಗಿ ನೋಡಿರಲಿಲ್ಲ! ಮೈಯೆಲ್ಲ ಹಿತ ಪ್ರವಹಿಸುತ್ತದೆ. ಮನಬಿಚ್ಚಿ ಹಂಚಿಕೊಳ್ಳುವಾಗ ಸಾಂತ್ವನದ ಮಾತು, ನೆರವಿನ ಹೆಗಲ ಜೊತೆ ತಣಿಸುವ ದೇಹವೂ ಸಿಗುತ್ತದೆ. ಮುಂಚೆ ಮನೆಯೊಳಗೆ ಭಯಪಡುತ್ತ ಕಾಲಿಡುತ್ತಿದ್ದವನು ಈಗ ನಿರ್ಭಯವಾಗಿ ಹೊರಗೇ ಕಾಲ ಕಳೆಯುತ್ತಾನೆ. ವಿಷಯ ಬಯಲಾಗಿ ಹೆಂಡತಿ ಕಾಳಿಯಾಗಿ ಸಮಸ್ಯೆ ಗಡುಚಾಗಿ ಕೊನೆಗೆ ಇಬ್ಬರೂ ನನ್ನೆದುರು ಕೂತು ಜಗಳವಾಡುತ್ತಿದ್ದಾರೆ. ಹೆಂಡತಿಯ ಕೂಗಾಟಕ್ಕೆ ಇವನ ಸಮರ್ಥನೆಯ ಸ್ವರ ಯಾವುದಕ್ಕೂ ಸಾಲದು. ಕಡೆಗೆ ಏಕಾಂತದಲ್ಲಿ ಮಾತಾಡುತ್ತಾನೆ: 'ಈಗ ನೋಡಿದಿರಲ್ಲ, ಹೀಗೆಯೇ ಮನೆಯಲ್ಲಿ ಯಾವಾಗಲೂ ನಡೆಯುತ್ತದೆ. ಅವಳ ಕೂಗಾಟ, ಗಲಾಟೆ ಎದುರಿಸಲಾಗುವುದಿಲ್ಲ. ನಾನೆಷ್ಟೇ ಸುಮ್ಮನಿದ್ದರೂ ಈಕೆ ಜಗಳ ತೆಗೆದೇ ತೆಗೆಯುತ್ತಾಳೆ. ನೀವೇ ಹೇಳಿ, ನನಗೂ ಸುಖದಿಂದ ಇರುವ ಹಕ್ಕಿಲ್ಲವೆ?'

ಹೆಂಡತಿಯ ಕೂಗಾಟ ನಿಭಾಯಿಸುವುದಕ್ಕೆ ಇವನ ಸಾಮರ್ಥ್ಯ ಸಾಲದೇನೋ ನಿಜ, ಹಾಗೆಂದು ಇವನ ಪರಸಂಬಂಧದ ಬಯಕೆ ಏನು ಸೂಚಿಸುತ್ತದೆ? ಇದು ದಾಂಪತ್ಯದಲ್ಲಿ ಉಂಟಾದ ಹತಾಶೆಯ ಫಲಶ್ರುತಿಯೆ? ಹಾಗಾದರೆ ಅವನು ಹಾಗೆಂದು ಹೇಳಬಹುದಿತ್ತಲ್ಲ? ಹೇಳಲು ಅಡ್ಡಿಯೇನು ಬಂತು? ಹೆಂಡತಿಯನ್ನು ಎದುರುಹಾಕಿಕೊಳ್ಳಲು ಭಯವೆ? ಹಾಗಾದರೆ ಪರಸಂಬಂಧವು ಹೆಂಡತಿಯ ವಿರುದ್ಧ ಒಳಗೊಳಗೇ ಮಾಡುವ ಮಸಲತ್ತೆ? ಇಂಥವರ ಗುಮ್ಮನಗುಸಕ (**passive aggressive**) ಸ್ವಭಾವದ ಬಗೆಗೆ ಇನ್ನೊಂದುಸಲ ನೋಡೋಣ.

ಇವೆರಡು ದೃಷ್ಟಾಂತಗಳಲ್ಲಿ ಏನು ಕಾಣುತ್ತಿದೆ? ತಮ್ಮ ದಾಂಪತ್ಯದಲ್ಲಿ ಸಿಗದಿರುವುದನ್ನು ಮೂರನೆಯವರಿಂದ ಕಂಡುಕೊಳ್ಳಲು ಬಯಸಿದ್ದಾರೆ. ಮನಸ್ಸು ಮಾಡಿದ್ದರೆ ಸಂಗಾತಿಯನ್ನು ಎದುರುಹಾಕಿಕೊಂಡರೂ ಸರಿ, ತಮ್ಮ ಅತೃಪ್ತಿಯನ್ನು ಬಿಚ್ಚಿತೋರಿಸಬೇಕಿತ್ತು, ಹಾಗೆ ಮಾಡದೆ ಸಂಗಾತಿಯನ್ನು ಬಿಟ್ಟು ಮೂರನೆಯವರನ್ನು ಬಯಸಿದ್ದು ಅನುಚಿತ ಎನ್ನಿಸುತ್ತದೆ ಅಲ್ಲವೆ? ಹಾಗಾದರೆ ಇನ್ನೊಂದು ದೃಷ್ಟಾಂತ ನೋಡಿ:

ದೃಷ್ಟಾಂತ ಮೂರು: ಇವರಿಬ್ಬರೂ ಪ್ರೀತಿಸಿ ಮದುವೆಯಾದವರು. ಮುಂಚೆ ಯಾವೊತ್ತೂ ಜಗಳವಾಡದೆ ಸದಾ ಅಂಟಿಕೊಂಡೇ ಇರುತ್ತಿದ್ದರು. ಬರಬರುತ್ತ ಬದುಕಿನ ಚೈತನ್ಯ ಸೋರಿ ಸೊಪ್ಪೆಯಾಯಿತು. ಕೂಟ ಯಾಂತ್ರಿಕವಾಯಿತು. ಕೆಲಕಾಲ ಪ್ರತ್ಯೇಕವಾಗಿ ವಾಸವಾಗಿದ್ದರು. ಮರಳಿ ಒಂದಾದರೂ ಆಕರ್ಷಣೆ ಮರಳಲಿಲ್ಲ. ಈಗ ಗಂಡ ತನ್ನ ಸ್ನೇಹಿತೆಯೊಬ್ಬಳಿಗೆ ಹತ್ತಿರವಾಗುತ್ತಿದ್ದಾನೆ. ಹೆಂಡತಿ ತನ್ನ ಸಹೋದ್ಯೋಗಿಯ ಬಗೆಗೆ ಆಸಕ್ತಿ ತೋರುತ್ತಿದ್ದಾಳೆ. ಇದು ಪರಸ್ಪರರ ಅರಿವಿಗೆ ಬಂದು ಇಬ್ಬರಿಗೂ ದಿಗಿಲಾಗಿ ನನ್ನನ್ನು ಭೇಟಿಮಾಡಿದ್ದಾರೆ. ಗಂಡ ಹೇಳುತ್ತಾನೆ: 'ನಾವಿಬ್ಬರೂ ಒಂದೇ ನಾಣ್ಯದ ಎರಡು ಮುಖಗಳಂತೆ ಹೊಂದಿಕೊಂಡಿದ್ದರೂ ಪರಸ್ಪರರಲ್ಲಿ ಆಸಕ್ತಿ ಏಕೆ ಕಳೆದುಕೊಂಡಿದ್ದೇವೆ ಎಂದು ಗೊತ್ತಾಗುತ್ತಿಲ್ಲ. ಮೂರನೆಯವರಿಗೆ ಹತ್ತಿರವಾಗುವುದು ಇಬ್ಬರಿಗೂ ಬೇಡ, ಆದರೂ ಇಬ್ಬರೂ ಮಾಡುತ್ತಿದ್ದೇವೆ! ಇದ್ಯಾಕೆ ಎಂಬುದೇ ಅರ್ಥವಾಗುತ್ತಿಲ್ಲ. ಒಬ್ಬರನ್ನೊಬ್ಬರು ಎಲ್ಲಿ ಕಳೆದುಕೊಂಡುಬಿಡುತ್ತೇವೋ ಎಂದು ಭಯವಾಗಿದೆ!' ಹೆಂಡತಿಯ ಕಡೆಗೆ ನೋಡುತ್ತಾನೆ. ಆಕೆ ತಲೆ ಅಲ್ಲಾಡಿಸುತ್ತಾಳೆ. ನಾನು ಇಬ್ಬರನ್ನೂ ದೃಷ್ಟಿಸುತ್ತೇನೆ. ಹೌದು, ಈಗಲೂ ಅವರು ಒಂದೇ ನಾಣ್ಯದ ಎರಡು ಮುಖಗಳಂತಿದ್ದಾರೆ, ಆದರೆ ಪರಸ್ಪರ ವಿಮುಖರಾಗಿದ್ದಾರೆ. ನನಗೆ ಸಯಾಮಿ ಅವಳಿಗಳ ನೆನಪಾಗುತ್ತದೆ.

ಒಂದು ವ್ಯಕ್ತಿ ಪರಸಂಗವನ್ನು ಆಯ್ಕೆಮಾಡಿಕೊಳ್ಳುವುದು ಸ್ವಂತ ನಿರ್ಧಾರವಾದರೂ ಅದರ ಹಿಂದೆ (ಮೊದಲ ಎರಡು ದೃಷ್ಟಾಂತಗಳಲ್ಲಿ) ವಿಷಮ ಸಾಂಗತ್ಯದ ಕುಮ್ಮಕ್ಕಿದೆ ಎನ್ನಬಹುದಾದರೂ ಮೂರನೆಯ ದೃಷ್ಟಾಂತದಲ್ಲಿ ಯಾರೊಬ್ಬರ ಕಡೆಗೂ ಬೆರಳು ತೋರಿಸಲಾಗುವುದಿಲ್ಲ. ಇದರರ್ಥ ಏನು? ಬಗೆಹರಿಯದ ಭಿನ್ನಾಭಿಪ್ರಾಯವೇ ಇರಲಿ, ಅನನ್ಯ ಹೊಂದಾಣಿಕೆಯೇ ಇರಲಿ, ಪರಸಂಗಕ್ಕೆ ಅದರದೇ ಬೇರೆ ಮೂಲವಿದೆ, ಹಾಗೂ ಅದು ದಾಂಪತ್ಯದಲ್ಲೇ ಅಡಕವಾಗಿದೆಯೆಂದು ಅನ್ನಿಸುತ್ತದೆ!

ಪರಸಂಬಂಧಕ್ಕೂ ದಾಂಪತ್ಯಕ್ಕೂ ಇರುವ ಸಂಬಂಧವೇನು ಎನ್ನುವುದನ್ನು ಮುಂದಿನ ಸಲ ಅರಿಯೋಣ.

ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ.
ಲೈಂಗಿಕ ಸಮಸ್ಯೆಗಳಿಗೆ: 8050255229 (ಮಧ್ಯಾಹ್ನ 3ರಿಂದ 5ರ ತನಕ);
ದಾಂಪತ್ಯ ಸಮಸ್ಯೆಗಳಿಗೆ: 8494944888 (ಬೆಳಿಗ್ಗೆ 11ರಿಂದ ಸಂಜೆ 5ರ ತನಕ)
ಲೇಖಕರ ವಿಳಾಸ: www.medisex.org